## ಪತ್ರಿಕಾ ಪ್ರಕಟಣೆ

## ಈಶಾನ್ಯ ವಿಭಾಗ ಬೆಂಗಳೂರು ನಗರ

# ಸಂಪಿಗೆಹಳ್ಳಿ ಪೊಲೀಸರ ಮಹತ್ವದ ಕಾರ್ಯಾಚರಣೆ

## ಇಬ್ಬರು ಅಪಹರಣಕಾರರ ಬಂಧನ

ದಿನಾಂಕ.02.09.2022 ರಂದು ಬೆಳಗಿನ ಜಾವ ಸಂಪಿಗೆಹಳ್ಳಿ ಪೊಲೀಸ್ ಠಾಣೆಯ ಸರಹದ್ದಿನ ಮಾನ್ಯತಾ ಟೆಕ್ ಪಾರ್ಕನಲ್ಲಿರುವ ಮಾನ್ಯತಾ ರೆಸಿಡೆನ್ಸಿಯಲ್ಲಿ 14 ವರ್ಷದ ಬಾಲಕನನ್ನು ಸಿನಿಮೀಯಾ ಶೈಲಿಯಲ್ಲಿ ಪಿರ್ಯಾದುದಾರರ ಮನೆಗೆ ಬಂದು ಬೆಡ್ ರೂಮ್‌ನಲ್ಲಿ ಮಲಗಿರುವವನನ್ನು ಅವರ ಕ್ರೇಟಾ ಕಾರಿನಲ್ಲಿಯೇ ಅಪಹರಣ ಮಾಡಿಕೊಂಡು ತುಮಕೂರು ಕಡೆಗೆ ಹೋಗಿ ದಾಬಸ್‌ಪೇಟೆ ಹತ್ತಿರದಿಂದ ಪಿರ್ಯಾದುದಾರರಿಗೆ ಕರೆ ಮಾಡಿ.15,00,000/–ಗಳನ್ನು ಕೊಡದ್ದಿದ್ದರೆ ಮಗನನ್ನು ಕೊಲೆಮಾಡುವುದಾಗಿ ಬೆದರಿಕೆ ಹಾಕಿ ಪಿರ್ಯಾದುದಾರರಿಂದ ನಗದು ಹಣ.15,00,000/–ಗಳನ್ನು ಅಪಹರಣಕಾರರು ತಾವಿದ್ದ ಸ್ಥಳಕ್ಕೆ ತರಿಸಿಕೊಂಡು ಹಣ ಪಡೆದು ಬಾಲಕನ್ನು ಬಿಟ್ಟು ಕಾರು ಮತ್ತು ಹಣದ ಸಮೇತ ಪರಾರಿಯಾಗಿದ್ದು, ಈ ಬಗ್ಗೆ ಪಿರ್ಯಾದುದಾರರು ನೀಡಿದ ದೂರಿನ ಮೇರೆಗೆ ಠಾಣಾ ಮೊ.ಸಂ 184/2022 ಕಲಂ 364(ಎ) ಐಪಿಸಿ ರಿತ್ಯಾ ಪ್ರಕರಣ ದಾಖಲಾಗಿರುತ್ತದೆ.

ಸದರಿ ಘಟನೆಯನ್ನು ಗಂಭೀರವಾಗಿ ಪರಿಗಣಿಸಿದ ಮಾನ್ಯ ಡಿಸಿಪಿ ಈಶಾನ್ಯ ವಿಭಾಗದವರು ಅಧಿಕಾರಿ ಸಿಬ್ಬಂದಿಗಳನ್ನೊಳಗೊಂಡ ವಿಶೇಷ ತಂಡವನ್ನು ರಚಿಸಿದ್ದರು. ಸದರಿ ವಿಶೇಷ ತಂಡವು ಘಟನೆ ನಡೆದ ದಿನದಿಂದ ಸುಮಾರು 20 ದಿನಗಳ ಸತತ ಪ್ರಯತ್ನಪಟ್ಟು ತನಿಖೆಯಲ್ಲಿ ತಾಂತ್ರಿಕ ಹಾಗೂ ವೈಜ್ಞಾನಿಕ ವಿಧಾನಗಳನ್ನು ಅಳವಡಿಸಿಕೊಂಡು ಸತತ ಪರಿಶ್ರಮದಿಂದ ದಿನಾಂಕ:20.09.2022 ಕೃತ್ಯಕ್ಕೆ ಬಳಸಿದ್ದ ಮೋಟಾರ್ ಸೈಕಲ್‌ನೊಂದಿಗೆ ಈ ಕೆಳಕಂಡ ಆರೋಪಿಗಳಾದ:

ಎ–1 ಸುನೀಲ್ ಕುಮಾರ್ ಎಂ @ ಸುನೀಲ್ ರಾಜ್ 23 ವರ್ಷ, ವಾಸ ಗುಡಿಬಂಡೆ ತಾಲ್ಲೂಕ್, ಚಿಕ್ಕಬಳ್ಳಾಪುರ ಜಿಲ್ಲೆ.

ಎ–2 ನಾಗೇಶ್ ವೈ ವಿ, 22 ವರ್ಷ, ವಾಸ ಮಂಡಿಕಲ್ ಹೋಬಳಿ, ಚಿಕ್ಕಬಳ್ಳಾಪುರ ತಾ॥ & ಜಿಲ್ಲೆ

ಎಂಬುವರನ್ನು ದಿನಾಂಕ 20.09.2022 ರಂದು ದಸ್ತಗಿರಿಪಡಿಸಿ ಆರೋಪಿಗಳಿಂದ ಕೃತ್ಯಕ್ಕೆ ಸಂಬಂಧಿಸಿದ ನಗದು ಹಣ .9,69,500/–ಗಳನ್ನು ಮತ್ತು ಪಿರ್ಯಾದುದಾರರಿಂದ ಸುಲಿಗೆ ಮಾಡಿದ್ದ ಹಣದಲ್ಲಿ ಖರೀದಿಸಿದ ಸುಮಾರು.1,50,000/– ಬೆಲೆ ಬಾಳುವ ಒಂದು ಕೆ.ಟಿ.ಎಂ ಬೈಕ್ ಮತ್ತು. 39,000/– ಬೆಲೆ ಬಾಳುವ ಕೆನಾನ್ ಡಿಜಿಟಲ್ ಎಸ್.ಎಲ್.ಆರ್ ಕ್ಯಾಮರ ಹಾಗೂ ಆರೋಪಿಗಳು ಕೃತ್ಯಕ್ಕೆ ಬಳಸಿದ್ದ 50,000/– ಬೆಲೆ ಬಾಳುವ ಒಂದು ಹೀರೋ ಫ್ಯಾಷನ್ ಪ್ರೋ ಬೈಕ್‌ನ್ನು ಹಾಗೂ ಅಪಹರಣ ಮಾಡಲು ಬಳಸಿಕೊಂಡಿದ್ದ. 12,00,000/– ಬೆಲೆ ಬಾಳುವ ಒಂದು ಕ್ರೇಟಾ ಕಾರ್‌ನ್ನು ವಶಪಡಿಸಿಕೊಂಡಿರುತ್ತದೆ.

ಬೆಂಗಳೂರು ನಗರ ಈಶಾನ್ಯ ವಿಭಾಗದ ಉಪ-ಪೊಲೀಸ್ಆಯುಕ್ತರಾದ ಡಾ॥ ಅನೂಪ್ ಎ ಶೆಟ್ಟಿ, ಐ.ಪಿ.ಎಸ್ ರವರ ಮಾರ್ಗದರ್ಶನದಲ್ಲಿ ಮತ್ತು ಸಂಪಿಗೆಹಳ್ಳಿ ಉಪ ವಿಭಾಗ ಸಹಾಯಕ ಪೊಲೀಸ್ ಆಯುಕ್ತರಾದ ಶ್ರೀ ರಂಗಪ್ಪ ಟಿ ರವರ ನೇತೃತ್ವದಲ್ಲಿ ಸಂಪಿಗೆಹಳ್ಳಿ ಪೊಲೀಸ್ ಠಾಣೆಯ ಪೊಲೀಸ್ ಇನ್ಸ್‌ಪೆಕ್ಟರ್ ಶ್ರೀ ಕೆ.ಟಿ.ನಾಗರಾಜು, ಪೊಲೀಸ್ ಸಬ್-ಇನ್ಸ್‌ಪೆಕ್ಟರ್ ಶ್ರೀ ಪ್ರವೀಣ ಕುಮಾರ್.ಕೆ.ಎಂ, ಹಾಗೂ ಸಿಬ್ಬಂದಿಗಳಾದ ಶ್ರೀ ವಿಜಯ್ ಕುಮಾರ್ ಹೆಚ್.ಸಿ.7787, ಶ್ರೀ ಮುರಳಿಧರ ಹೆಚ್.ಸಿ.7802, ಶ್ರೀ ವಿಜಯ್ ಕುಮಾರ್ ಬಾಂಗಿ ಹೆಚ್.ಸಿ. 10451, ಶ್ರೀ ಅಶೋಕ್ ಕಾಮಗೋಣ ಹೆಚ್.ಸಿ. 10535, ಶ್ರೀ ಗೌಸಪಾಕ್. ಪಿ.ಸಿ.14544. ಶ್ರೀ ಇಸ್ಮಾಯಿಲ್ ಪಿ.ಸಿ.14539. ಶ್ರೀ ಪಾಂಡುರಂಗ ಉದಯ ನಾಯ್ಕ್ ಪಿ.ಸಿ.16475. ಶ್ರೀ.ಮಂಜುನಾಥ ಹೆಚ್ಸಿ. 16478. ಶ್ರೀ ಹನುಮಂತ್ರಾಯ, ಪಿ.ಸಿ.16474. ಎ.ಎಸ್.ಐ ಶ್ರೀ ಬಾಬು.ಎನ್. ಶ್ರೀ ಸಿದ್ರಾಮಣ್ಣ ಹೆಚ್.ಸಿ.10096, ಶ್ರೀ ರವಿ ಕುಮಾರ್,ಹೆಚ್.ಸಿ.10126 ಹಾಗೂ ರವರುಗಳು ವಿಶೇಷ ಕಾರ್ಯಾಚರಣೆ ಮಾಡಿ ಆರೋಪಿಗಳನ್ನು ಬಂಧಿಸುವಲ್ಲಿ ಯಶಸ್ವಿಯಾಗಿರುತ್ತಾರೆ.